ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ದೇವರಾಜ ಮೊಹಲಾದಲ್ಲಿರುವ ಚನ್ನಬಸಮ್ಮನ ವಿಷಯದಲ್ಲಿ—

ಸ್ಯ 1889ನೇ ಇಸವಿ ದಿವಾಳೀ ಕೇಸ್ ನಂಬರ್ 90.

ಹುಕುಂ.

ಮೇಲ್ಕಂಡ ಚನ್ನಬಸಮ್ಮನು ನಿರ್ಬಂಧದಿಂದ ಖುಲಾಸೇ ಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೊರ್ಟು ಕೂಬರೂ ಅರ್ಜೇದಾರಳಾದ ಚನ್ನಬಸಮ್ಮನ ಪರವಾಗಿ ಮತ್ತು ಸದರೀಯವಳ ಲೇಣೇದ್ರಾರಾದ 1ನೇ ಯಿಯ್ಯಣಚಾರ್ರು ತರಫೆ· 3ನೇ ವೀರಂಣ ಖುದ್ದು ಹಾಜರು ಯಿವೇಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂಪರೆ —2ನೇ ಮೈಸೂರು ಧನಾಭಿವೃದ್ಧಿ ಬ್ಯಾಂಕ ಯೇಜಂಟ್ ಕೇಪಗಿರಿರಾವ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚನ್ನಬಸಮ್ಮ ಯಂಬುವಳು ಹೊಂದುವದಕ್ಕೆ ಪಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಅದಕ್ಕೆ ಲಗ್ನ ತ್ತಾಗಿರುವ ಪಟ್ಟಣ್ಣುಲ್ಲಿ ಕಂಡ ಯಾವ ಸೊಲಕ್ಕೋಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜೂ 26ನೇ ತಾರೀಖಿನಲ್ಲಿ ಈ ಕೋರ್ಟು ಮೊಹರೆ ನಮ್ಮ ದಸ್ತಖತ್‌ನಿನೀ ಕೊಡಲ್ಪಟ್ಟಿತು.

ಸೂಚನೆಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಕೊಬಲಿಗೆ	ಯಾವಾಗ ದೇಣೇಜ್ಜೆಂ ಟಾದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಟಿ. ಗ
1	ಮೈಸೂರು ಇಂಪೀರಿಯಲ್ ಕಂಪನಿ ಯೀಜಪ್ಟ್ ನಂಜಂಣ	73 12 10	..	ಡಿಕರಿ	
2	ಧನಾಭಿವೃದ್ಧಿ ಬ್ಯಾಂಕ್ ಕೇಪಗಿರಿರಾವ್ ..	86 0 0	..	ಡಿಟೋ	
		159 12 10			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 8ನೇ ಜುಲೈ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಡಿಸ್ಟ್ರಿಕ್ಟು ಮಜಕೂರು ಮಂಡ್ಯ ತಾಲ್ಲೂಕು ಗ್ರಾಮಾಂತ್ರಗಳ ಸರಕಾರೀ ಬಂಜರು ಜಮೀನುಗಳಲ್ಲಿ ಯಿರುವ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳುವ ಗುತ್ತಿಗೆದನ್ನ 1889ನೇ ಇಸವಿ ಆಗಸ್ಟು ತಾರೀಖು 15 ರಲ್ಲು ಮಂಡ್ಯ ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ರ ರೂಬರೂ ಪೇಟೂಪ್ರೋಟಿಯಿಂದ ಹರಾಜು ಮಾಡಿಸುತ್ತಾಗಿ ಇಚ್ಛೆಯುಳ್ಳ ಜನಗಳು ಹಾಜರಾಗಿ ಚೆಪ ದರಖಾಸ್ತು ಮೂಲಕ ಪಡೆಯಬಹುದು.

2. ಈ ಕಂಟ್ರಾಕ್ಟು ವಾಯಿದೆಯು 1890ನೇ ಇಸವಿ ಮಾರ್ಚಿ ಆಖೈರುವರೆಗೆ ಪೂರ್ತಿಯಾಗಿರುತ್ತೆ.

3. ಚಡ ಸವಾಲ್‌ದಾರನು ತನ್ನ ಬೀಟು ಮೊಬಲಗ್ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನ ಶೇವಣಿಯಾಗಿ ತಕ್ಷಣವೇ ಹಾಜರ್ಮಾಡಬೇಕು, ಬೆಳೆದ ಮೊಬಲಗನ್ನು ಹರಾಜು ಹೇಳಿ ಲಾಗಾಯಿತು 15 ದಿವಸಗಳ ಒಳಗಾಗಿ ಜಮವೇ ಮಾಡಬೇಕು ಇದಕ್ಕೆ ತಪ್ಪಿದರೆ 'ಹಾಜರ್ಮಾಡಿದ ಶೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಡಿಪಾಜಿಟ್ ಹಾಜರ್ಮಾಡದೇ ಯಿದ್ದಾಗ್ಯೂ ಅಥವಾ ಬಾಕೀ ಮೊಬಲಗು ಪೂರ್ತೀಮಾಡದೇ ತಪ್ಪಿದಾಗ್ಯೂ ಈ ಬಾಬು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಪೆಂಟೂಗುವ ನಷ್ಟಕ್ಕೆ ಮೊದಲ ಚಡ ಸವಾಲ್‌ದಾರನು ಗುರಿಯಾಗಿರುವನು, ಚಡಸವಾಲ್ ಮೊಬಲಗಿನ ಮೇಲೆ ೧ ರೂಪಾಯಿ ಒಂದಕ್ಕೆ ಒಂದು ಆಣೆ ಮೇರಗೆ ಲೋಕಲ್ ಸೆಸ್ಸನ್ನು ಸಹ ಚಡ ಸವಾಲ್‌ದಾರನು ಕೊಡಬೇಕು.

4. ಈ ಹರಾಜ್ ದಿವ್ಯಾ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

5. ಇಜಾರ್‌ದಾರನು ಸರ್ಕಾರದ ಬಂಜರು ಜಮೀನುಗಳಲ್ಲಿ ಇರುವ ಹುಲ್ಲನ್ನು ಹುಲ್ಲು ಇಜಾರೆ ಮಾಡಿಕೊಂಡವರು ಮೇಯಿಸಿಕೊಳ್ಳುವದಕ್ಕೆ ಅಭ್ಯಂತರ ಪಡಿಸಕೂಡದು.

6. ಸರ್ಕಾರದ ಬಂಜರು ಜಮೀನುಗಳನ್ನು ನಗದೀಯಾತಿಗೆ ದರಖಾಸ್ತು ಬಂದಿದ್ದರ ಮೇಲೆ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಯಿಜಾರ್‌ದಾರನು ಅಡ್ಡಿ ಮಾಡಕೂಡದು.

7. ಈ ಕಲ್ಲುಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳಲ್ಲಿ ಗುಂಡಿಗಳು ಮಾಡಿ ಅರೂಪ ಪಡಿಸಕೂಡದು, ಹಾಗೆ ಮಾಡಿದ್ದಾದರೆ ಅಂಥಾ ಗುಂಡಿಗಳನ್ನು ತಕ್ಷಣವೆ ಯಿಜಾರ್‌ದಾರನು ಪಾತಲಾಗವಡಿನಿಂದ ಮುಚ್ಚಿ ಪೂರ್ವದ ಸ್ಥಿತಿಗೆ ತರುವದಕ್ಕೆ ಬದ್ಧನಾಗಿರಬೇಕು.

8. ಇಜಾರ್‌ದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳೀದಾರ್ರ ಅನುಮತಿ ವಿನಹ ಆರಿಸಿ ಕೊಳ್ಳಕೂಡದು, ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕೆ ಆಗಲಿ ಅಥವಾ ಇಜಾರ್‌ದಾರ್ ವಿನಹ ಇತರರಿಗೆ ವಿಕ್ರಯಿಸುವದಕ್ಕೆ ಆಗಲಿ ಹಿಡುವಳೀದಾರ್ರಿಗೆ ಅಧಿಕಾರ ಇರುವದಿಲ್ಲವು.

ಟಿ ಆನಂದರಾವ್,
ಡೆಪ್ಯೂಟಿ ಕಮ್ಮಿಷನ

ಹಾಸನ ಡಿಸ್ಟ್ರಿಕ್ಟ್.

1889ನೇ ಇಸವಿ 4ನೇ ಜುಲೈ.

ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಸಮಿಾಪ ವೃತ್ತಿಯಲ್ಲರುವ ಹೊಳೇನರಸೀಪುರ ತಾಲ್ಲೂಕು ಈಚೇರಿಯಲ್ಲಿ ಸ್ಯ 1889ನೇ ಇಸವಿ ಆಗಸ್ಟ್ ತಾರೀಖು 19ನೇ ಸೋಮವ್ಹಾರ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಆಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮೆಂಜೂರ್ ಮಾಡುವ ಪರಿಯಂತರ ಖಾಯವಾದ್ದಾಗಿ ತಿಳಿದುಕೊಳ್ಳ ಕೂಡದು.

4. ಈ ಇಜಾರೆಯು ಸ್ಯ 1890ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಖಲಗು ವೈಕಿ ಕೀಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟು ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ಪಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದಾಣಿಯಂತೆ ಆಗುವ ಟೋಕಲ ಸೆಸ್ಸು ದೇವೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ರೊಕ್ಕ ಮೊಖಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಖಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವ ದಾರ್ರ ಸಮ್ಮತಿಯನ್ನ ಪಡೆಯಬೇಕು, ಜಮೀನು ಹಿಡುವ ದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು, ಇಜಾರೆದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಚರಾವು ಪಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರ್ ಜಮೀನುಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಸಕ್ತು ಮಾತ್ರ ಇಜಾರೆದಾರನಿಗೆ ವ್ರಳಿದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನು ಅಗಿಯಕೂಡದು ಮಂದುವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಕ್ ಯಿರುವ ಹಾಗೆ ಮಾಡಬೇಕು.

ಪಿ. ಏನ್. ಪೂರ್ಣಯ್ಯ.
ಡೆಪ್ಯೂಟಿ ಕಮ್ಮಿಷನರ್.